# ಮಕ್ಕಳ ಪ್ರವಾಸ



**ಶ್ರೀಮತಿದೇವಿ**

ಕಲೆ: ಸೌಮ್ಯ ಪ್ರಭು ಕಲ್ಯಾಣ್‌ಕರ್

ಶಾಲೆಯಲ್ಲಿ ಟೀಚರ್ ಪ್ರವಾಸಕ್ಕೆ ಹೋಗುವ ಬಗ್ಗೆ ಹೇಳಿದಾಗಿನಿಂದ ಶಾರ್ವಿಗೆ ಬರೀ ಅದರದ್ದೇ ಆಲೋಚನೆ. ಯಾವ ಪಾಠವೂ ತಲೆಗೆ ಹೋಗದೇ, ಕೂತರೂ ನಿಂತರೂ ಬರೇ ಪ್ರವಾಸಕ್ಕೆ ಹೋಗುವ ವಿಷಯವೇ ತಲೆಯಲ್ಲಿ ಓಡಾಡುತ್ತಿತ್ತು.

ಮೂರನೇ ತರಗತಿಯಲ್ಲಿ ಓದುತ್ತಿರುವ ಶಾರ್ವಿಗೆ ತುಂಬಾ ಗೆಳೆಯ-ಗೆಳತಿಯರು. ಮನೆಯಲ್ಲೂ ಶಾಲೆಯಲ್ಲೂ 'ಮಾತಿನ ಮಲ್ಲಿ' ಎನಿಸಿದ ಅವಳಿಗೆ ಹೋದಲ್ಲೆಲ್ಲಾ ಸ್ನೇಹಿತರು. ಎಲ್ಲೇ ಹೋದರೂ, ಯಾರ ಜೊತೆಗೇ ಇದ್ದರೂ ಕುಣಿಯುತ್ತಾ, ಗುನುಗುತ್ತಾ ಇರುತ್ತಿದ್ದಳು. ಇಡೀ ದಿನ ಮಾತಾಡುತ್ತಲೇ ಇರುವ ಅವಳು ಮಲಗಿದಾಗಲೇ ಬಾಯಿ ಮುಚ್ಚುವುದು. ಮೋಜು ಮಸ್ತಿಯಲ್ಲಿ ದಿನಕಳೆಯುವ ಅವಳಿಗೆ ಮನೆಗೆ ಬಂದ ಮೇಲೆ ಆ ದಿನದ ಹೋಂವರ್ಕ್ ಏನೆಂಬುದೂ ನೆನಪಿರುತ್ತಿರಲಿಲ್ಲ. ಹೀಗಿದ್ದಾಗ, ಎರಡು ದಿನದ ಪ್ರವಾಸಕ್ಕೆ ತರಗತಿಯ ಮಕ್ಕಳೆಲ್ಲಾ ಕೆಳಕೋಟೆಗೆ ಹೋಗುವ ವಿಷಯವನ್ನು ಶಾಲೆಯಲ್ಲಿ ಹೇಳಿದ್ದರು. ಬಸ್ಸಿನಲ್ಲಿ ಎಲ್ಲರೂ ಸೇರಿ ಕೆಳಕೋಟೆಗೆ ಹೋಗಿ ಅಲ್ಲಿ ಇರುವ ಕೋಟೆ, ಕೆರೆ, ಹಳೆಯ ದೇವಸ್ಥಾನ, ಮ್ಯೂಸಿಯಂಗಳನ್ನೆಲ್ಲಾ ನೋಡುವ ಪ್ಲಾನ್ ಇತ್ತು. ಮೊದಲ ಬಾರಿಗೆ ಅವಳು ಸ್ನೇಹಿತರ ಜೊತೆ ಒಂದು ಹಗಲು ಮತ್ತು ರಾತ್ರೆ ಕಳೆಯುವವಳಿದ್ದಳು. ಮನೆಯಲ್ಲಿ ಎಲ್ಲರಿಗೂ ಈ ವಿಷಯ ಹೇಳುವಾಗ ಅವಳಿಗೆ ಸಂತೋಷದಲ್ಲಿ ನಗುವನ್ನು ತಡೆಯಲು ಆಗುತ್ತಿರಲಿಲ್ಲ. ಅಜ್ಜ-ಅಜ್ಜಿಗೆ ಫೋನ್ ಮಾಡಿ ವಿವರಿಸಿ ಹೇಳಿದಳು. ಅಕ್ಕಪಕ್ಕದ ಮನೆಗೆ ಗೆಳೆಯ ಗೆಳತಿಯರಿಗೆ ವರ್ಣಿಸಿದಳು.

ತೆಗೆದುಕೊಂಡು ಹೋಗಬೇಕಾದ ಸಾಮಾನುಗಳ ಪಟ್ಟಿಯನ್ನು ಮಾಡಿದಳು. ಹಾಕುವ ಬಟ್ಟೆ, ಹಲ್ಲುಜ್ಜುವ ಬ್ರಷ್, ಬಾಚಣಿಗೆ, ಹೊದೆಯಲು ಚಾದರ, ಸೋಪ್, ಜೊತೆಯಲ್ಲಿ ತಿನ್ನಲು ಕುರುಕುರು-ಜ್ಯೂಸ್, ಅಜ್ಜ ತಂದುಕೊಟ್ಟಿದ್ದ ಟಾರ್ಚ್, ರಾತ್ರಿ ಆಕಾಶ ನೋಡಲು ದುರ್ಬೀನು, ರಾತ್ರಿ ಊಟ ಅಲ್ಲೇ ತಯಾರಿಸುವುದರಿಂದ ತಾನೂ ಜೊತೆಯಲ್ಲಿ ತರಕಾರಿ ಹೆಚ್ಚಲು ಸಣ್ಣ ಚಾಕು... ಪಟ್ಟಿ ಬೆಳೆಯುತ್ತಲೇ ಇತ್ತು. ಕೊಳ್ಳುವ ಸಾಮಾನುಗಳನ್ನು 10 ಬಾರಿಯಾದರೂ ಅಮ್ಮನಿಗೆ ನೆನಪಿಸಿದಳು. ಎಲ್ಲಾ ತಯಾರಿ ಮುಗಿದು, ರಾತ್ರಿಯ ಊಟವಾಗಿ ಮಲಗಿದರೂ ನಿದ್ರೆಯ ಸುಳಿವೂ ಇರಲಿಲ್ಲ. ಅಮ್ಮನ ಬಳಿ ಬೈಸಿಕೊಂಡರೂ ಮತ್ತೂ ವಟವಟ ಮಾತಾಡುತ್ತಾ ಇದ್ದಾಗ ಶಾರ್ವಿಯ ಅಮ್ಮನ ಫೋನ್ ರಿಂಗಾಯಿತು. 'ಅರೇ ನಿನ್ನ ಫ್ರೆಂಡ್ ಸೂರ್ಯನ ಅಮ್ಮ ಸ್ಮಿತಾ ಕಾಲ್ ಮಾಡಿದ್ದಾರೆ' ಎನ್ನುತ್ತಾ ಅಮ್ಮ ಫೋನ್ ಎತ್ತಿದಳು.

ಆ ಕಡೆಯಿಂದ ಸ್ಮಿತಾ, 'ನಾನೆಷ್ಟು ಹೇಳಿದರೂ ಸೂರ್ಯ ಪ್ರವಾಸಕ್ಕೆ ಹೋಗಲು ಒಪ್ಪುತ್ತಿಲ್ಲ. ಟಿ.ವಿ, ಮೊಬೈಲ್ ಬಿಟ್ಟು ಅವನಿಗೆ ಒಂದು ದಿನ ಇರುವುದೂ ಕಷ್ಟವಾಗಿದೆ' ಎಂದು ಆತಂಕದಿಂದ ಹೇಳುತ್ತಿದ್ದರು. ಶಾರ್ವಿಯ ತರಗತಿಯಲ್ಲೇ ಇರುವ, ಸೂರ್ಯ